# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 71 (44) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸುವ ದಿನಾಂಕ | : | 17.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಸರ್ಕಾರಿ ಶಾಲಾ ಶಿಕ್ಷಕರಿಗೆ ಶಿಕ್ಷಣ ಇಲಾಖೆ ಹಾಗೂ ಇತರ ಇಲಾಖೆಗಳ ವತಿಯಿಂದ ವಹಿಸಲಾಗುತ್ತಿರುವ ಬೋಧಕೇತರ ಕೆಲಸಗಳು ಯಾವುವು: (ಸಂಪೂರ್ಣ ಪಟ್ಟಿ ನೀಡುವುದು). | 1) ಜನಗಣತಿ,<br>2) ಚುನಾವಣೆ<br>3)ಮತದಾರರ ಪಟ್ಟಿ ಪರಿಷ್ಕರಣೆ (BLO Duties).<br>4) ಇಲಾಖೆಗೆ ಸಂಬಂಧಿಸಿದ ವಿವಿಧ ಜಾಗೃತಿ ಜಾಥಾಗಳು ಮತ್ತು<br>5) SIR (ವಿಶೇಷ ಸಮಗ್ರ ಮತಪಟ್ಟಿ ಪರಿಷ್ಕರಣೆ) |
| ಆ) | ಜನಗಣತಿ, ಚುನಾವಣೆ, ಮತದಾರರ ಪಟ್ಟಿ ಪರಿಷ್ಕರಣೆ (BLO Duties), ವಿವಿಧ ಜಾಗೃತಿ ಜಾಥಾಗಳು ಮತ್ತು ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮೀಕ್ಷೆಗಳಿಗೆ ಶಿಕ್ಷಕರನ್ನು ಬಳಸಿಕೊಳ್ಳುತ್ತಿರುವುದರಿಂದ ವರ್ಷದಲ್ಲಿ ಎಷ್ಟು ದಿನಗಳ ಬೋಧನಾ ಸಮಯ ನಷ್ಟವಾಗುತ್ತಿದ್ದೆ. | ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (RTE-2009) ಸೆಕ್ಷನ್ 27ರ ಪ್ರಕಾರ, ಒಂದು ದಿನಕ್ಕೆ 5.30 ಘಂಟೆಗಳ ಬೋಧನಾ ಅವಧಿಯನ್ನು ನಿಗದಿಪಡಿಸಲಾಗಿದೆ. ಪ್ರತಿಯೊಂದು ಶಿಕ್ಷಕರು ಸದರಿ ಕಾರ್ಯಗಳಿಗೆ ನಿಯೋಜಿಸಲ್ಪಡುವ ಅವಧಿಯಂತೆ ಬೋಧನಾ ಸಮಯ ನಷ್ಟವಾಗುತ್ತಿದೆ. ಸದರಿ ಅವಧಿಯನ್ನು ವಿಶೇಷ ತರಗತಿಗಳನ್ನು ನಡೆಸಿ ಸರಿದೂಗಿಸಲಾಗುತ್ತಿದೆ. |
| ಇ) | ಶಿಕ್ಷಕರು ನಿತ್ಯ ಶಾಲಾ ಕೆಲಸಗಳಿಗಾಗಿ "ಸ್ಯಾಟ್ಸ್" (SATS), ಬಿಸಿಯೂಟ ಆ್ಯಪ್, ಕ್ಷೀರಭಾಗ್ಯ ಆ್ಯಪ್ ಸೇರಿದಂತೆ ಹತ್ತಾರು ಮೊಬೈಲ್ ಆ್ಯಪ್‌ಗಳಲ್ಲಿ ಮಾಹಿತಿ ಅಪ್ ಲೋಡ್ ಮಾಡಬೇಕಾಗಿರುವುದು ನಿಜವೇ? ಈ ಆನ್‌ಲೈನ್ ದಾಖಲಾತಿಗಳ ಕೆಲಸದಿಂದಾಗಿ ಶಿಕ್ಷಕರು ತರಗತಿಯಲ್ಲಿ ಪಾಠ ಮಾಡುವುದನ್ನು ಬಿಟ್ಟು ಮೊಬೈಲ್ ಹಿಡಿದು ಕೂರುವ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? | ಹೌದು.<br><br>ಶಿಕ್ಷಕರು ನಿತ್ಯ ಶಾಲಾ ಕೆಲಸಗಳಿಗಾಗಿ "ಸ್ಯಾಟ್ಸ್" (SATS), ಬಿಸಿಯೂಟ ಆ್ಯಪ್, ಕ್ಷೀರ ಭಾಗ್ಯ ಆ್ಯಪ್ ಸೇರಿದಂತೆ ಹತ್ತಾರು ಮೊಬೈಲ್ ಆ್ಯಪ್‌ಗಳಲ್ಲಿ ಮಾಹಿತಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ.<br><br>ತರಗತಿ ಬೋಧನೆಯ ಅವಧಿಯನ್ನು ಹೊರತುಪಡಿಸಿ, ಅತ್ಯಲ್ಪ ಸಮಯದಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುತ್ತಿದೆ. |
| ಈ) | ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (RTE-2009) ಸೆಕ್ಷನ್ 27ರ ಪ್ರಕಾರ, ಶಿಕ್ಷಕರನ್ನು ಕೇವಲ ದಶವಾರ್ಷಿಕ ಜನಗಣತಿ, ವಿಪತ್ತು ಪರಿಹಾರ ಮತ್ತು ಚುನಾವಣೆ ಕೆಲಸಗಳನ್ನು ಹೊರತುಪಡಿಸಿ ಬೇರೆ ಯಾವುದೇ ಬೋಧಕೇತರ ಕೆಲಸಗಳಿಗೆ ಬಳಸಬಾರದು ಎಂಬ ನಿಯಮವಿದ್ದು, ರಾಜ್ಯದಲ್ಲಿ ಈ ನಿಯಮದ ಸ್ಪಷ್ಟ ಉಲ್ಲಂಘನೆ ಯಾಗುತ್ತಿರುವುದಕ್ಕೆ ಕಾರಣವೇನು? | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲ್ ಸಂಖ್ಯೆ: 5659/2007 ರಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಲು ಭಾರತ ಚುನಾವಣಾ ಆಯೋಗದ ಮತದಾರರ ಪಟ್ಟಿಗಳ ಕೈಪಿಡಿ ಅಕ್ಟೋಬರ್ 2016 ರ ಅಧ್ಯಾಯ 5 ರ ಕಂಡಿಕೆ 5.2 ಮತಗಟ್ಟೆ ಮಟ್ಟದ ಅಧಿಕಾರಿಗಳ ನಿಯೋಜನೆಗೆ 13 ವಿವಿಧ ಹುದ್ದೆಗಳನ್ನು ನೀಡಲಾಗಿರುತ್ತದೆ. ಅದರಲ್ಲಿ ಶಿಕ್ಷಕರ ಹುದ್ದೆಯೂ ಒಂದಾಗಿರುತ್ತದೆ ಹಾಗೂ ತೀರಾ ಅನಿವಾರ್ಯ ಸಂದರ್ಭಗಳಲ್ಲಿ ಕೆಲವೊಂದು ಷರತ್ತಿನ ಮೇರೆಗೆ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಲಾಗುತ್ತಿದೆ. |

**ಸಂಖ್ಯೆ:ಇಪಿ 93 ಪಿಎಂಎ 2026**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು